## ತಂತಿ ವಾದ್ಯಗಳ ತಾಯಿ

ಅಪ್ಪಟ ಭಾರತೀಯ ವಾದ್ಯ ಪ್ರಕಾರವಾಗಿರುವ ವೀಣೆಗೆ ಸಾಕಷ್ಟು ಪೌರಾಣಿಕ ಹಿನ್ನೆಲೆಯೂ ಇದೆ. ಭೀಮ, ರಾವಣ ಎಲ್ಲರೂ ವೀಣಾ ಪ್ರವೀಣರೇ ಆಗಿದ್ದರು. ರಾಮಾಯಣದ ಸುಂದರ ಕಾಂಡದಲ್ಲೂ ವೀಣೆಯ ಪ್ರಸ್ತಾಪವಿದೆ. ಮಹಾಮುನಿಗಳಾದ ತುಂಬುರು ನಾರದರು ವೀಣೆಯಲ್ಲಿ ಪಳಗಿದವರಾಗಿದ್ದರು. ವೇದಗಳ ಕಾಲದಲ್ಲೂ ವೀಣೆ ಬಳಕೆಯಲ್ಲಿತ್ತು.

ವೀಣೆ ಕರ್ನಾಟಕ ಸಂಗೀತ ನುಡಿಸಲು ಯೋಗ್ಯವಾದ ವಾದ್ಯ. ಒಂದು ಕೃತಿಯನ್ನು ಶ್ರುತಿ, ಲಯ ಮತ್ತು ಸಾಹಿತ್ಯದ ಮೂಲಕ ಸ್ಪಷ್ಟವಾಗಿ ನಾದ ಹೊಮ್ಮಿಸುವುದು ವೀಣೆಯ ವೈಶಿಷ್ಟ್ಯ. ಮಧುರವಾದ ನಾದ ಕೊಡುವ ವೀಣೆಯನ್ನು ಸಾಂಪ್ರದಾಯಿಕ ಶೈಲಿ ಹಾಗೂ ಸಮಕಾಲೀನ ಆಧುನಿಕ ಶೈಲಿಗಳಲ್ಲೂ ನುಡಿಸಬಹುದು. ದಕ್ಷಿಣಾದಿಯ ವೀಣೆ (ಚಿತ್ರವೀಣೆ, ಸರಸ್ವತಿ ವೀಣೆ, ಗೋಟುವಾದ್ಯ.. ಮುಂತಾದ) ಕಛೇರಿಗೆ ಮೃದಂಗ ಪಕ್ಕವಾದ್ಯ ಬಳಸಿದರೆ ಉತ್ತರಾದಿಯ ರುದ್ರವೀಣೆ, ಮೋಹನವೀಣೆ ಹಾಗೂ ವಿಚಿತ್ರ ವೀಣೆಗೆ ತಬಲಾ ಸಾಥಿ ಬೇಕು.

ಅಂದ ಹಾಗೆ ಎಲ್ಲ ತಂತಿ ವಾದ್ಯಗಳ ತಾಯಿ ವೀಣೆ ಎಂಬ ಕೀರ್ತಿ ವೀಣೆಗೆ ಸಲ್ಲುತ್ತದೆ.





ಸುಮಾ ಸುಧೀಂದ್ರ



ಹಲವು ಪ್ರಯೋಗಗಳನ್ನು ಮಾಡಿ 2017 ಮಾರ್ಚ್‌ನಲ್ಲಿ ಈ ಶಿವ ವೀಣೆಗೆ ಅಂತಿಮ ರೂಪ ನೀಡಿದರು. ಇದು ಡಿಟ್ಯಾಚೆಬಲ್ ಆಗಿದ್ದು, ವಾದ್ಯವನ್ನು ಬೇರೆಡೆಗೆ ಒಯ್ಯುವಾಗ ಸುಲಭವಾಗಿ ಭಾಗಗಳನ್ನು ಕಳಚಿ ಪ್ಯಾಕ್ ಮಾಡಿ ಒಯ್ಯಬಹುದು. ನುಡಿಸಾಣಿಕೆ, ಸಾಗಾಣಿಕೆ ಎರಡೂ ಅತ್ಯಂತ ಸುಲಭವಾಗಿರುವ ಕಾರಣ ಪ್ರಪಂಚದ ಯಾವುದೇ ಭಾಗದ ಕೇಳುಗರನ್ನು ತಕ್ಷಣ ಸೆಳೆಯಬಹುದು.

‘ಪೌರಾಣಿಕ ಹಿನ್ನೆಲೆ ಗಮನಿಸಿದರೆ ಶಿವ ‘ರುದ್ರವೀಣೆ’ ನುಡಿಸುತ್ತಿದ್ದ. ಶಿವನ ಭಕ್ತರು ಇಂದೂ ವೀಣೆಯ ನಾದವನ್ನು ಹೆಚ್ಚು ಆಲಿಸುತ್ತಾರೆ, ಇಷ್ಟಪಡುತ್ತಾರೆ. ಈ ಹಿನ್ನೆಲೆಯಲ್ಲಿ ಇದಕ್ಕೆ ಶಿವ ವೀಣೆ ಎಂದು ಹೆಸರು ಇಡಲಾಗಿದೆ. ಇದು ಶಿವನ ಭಕ್ತರಿಗೆ ಇಷ್ಟವಾಗಲಿ ಎಂದು ತಯಾರಿಸಿದ ವೀಣೆ’ ಎನ್ನುತ್ತಾರೆ ಡೆನಿಸ್.

ಓದಿದ್ದು ತಾಂತ್ರಿಕ ಶಿಕ್ಷಣ, ಆದರೆ ಸಂಗೀತದ ಮೇಲೆ ಅದಮ್ಯ ಪ್ರೀತಿ ಈ ವಿದೇಶಿ ಸಂಗೀತಗಾರನಿಗೆ. ಅದರಲ್ಲೂ ಕರ್ನಾಟಕ ಸಂಗೀತವನ್ನು ಅಳವಡಿಸಿದ್ದು ಮತ್ತೂ ವಿಶೇಷ. ವೀಣೆಯ ಅನ್ವೇಷಕ ಡೆನಿಸ್ ಪೆಟ್ರೊವ್ ತನ್ನ 10ನೇ ವಯಸ್ಸಿಗೆ ಮ್ಯಾಂಡೊಲಿನ್ ಕಲಿತು ನಂತರ ಗಿಟಾರ್, ಡ್ರಮ್ಸ್ ಮುಂತಾದ ವಾದ್ಯ ನುಡಿಸಾಣಿಕೆ ಕಲಿತರು. ಹಲವಾರು ರಾಕ್ ಬ್ಯಾಂಡ್‌ಗಳಲ್ಲಿ ಈ ವಾದ್ಯಗಳನ್ನು ನುಡಿಸಿದ್ದಾರೆ. ಮಾಸ್ಕೋದಲ್ಲಿ ಎಲೆಕ್ಟ್ರಾನಿಕ್ ಎಂಜಿನಿಯರಿಂಗ್ ಪದವಿ ಓದಿದ ಡೆನಿಸ್‌ಗೆ ಅವರ ತಂದೆ ಪಿಯಾನೊ ಉಡುಗೊರೆ ನೀಡಿದರು. ಸದ್ಯ ನ್ಯೂಯಾರ್ಕ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಡೆನಿಸ್ ವೀಣೆಯಲ್ಲಿ ಕರ್ನಾಟಕ ಸಂಗೀತವನ್ನು ನುಡಿಸುವುದನ್ನೂ ಕಲಿತಿದ್ದಾರೆ. ಇದರ ಫಲವೇ ಈ ವಿನೂತನ ‘ಶಿವ ವೀಣೆ’ಯ ಆವಿಷ್ಕಾರ.

ಈಚೆಗೆ ಈ ಶಿವ ವೀಣೆಯ ಲೋಕಾರ್ಪಣೆ ಕಾರ್ಯಕ್ರಮ ಬೆಂಗಳೂರಿನಲ್ಲೇ ನಡೆಯಿತು. ಪಿಟೀಲು, ಮೃದಂಗ, ಘಟ ವಾದ್ಯ ಸಹಕಾರದೊಂದಿಗೆ ಶಿವವೀಣೆಯನ್ನು ಸುಮಾ ಸುಧೀಂದ್ರ ಪ್ರಸ್ತುತಪಡಿಸಿ ನಾಡಿನ ಜನರಿಗೆ ಹೊಸ ವೀಣೆಯ ನಾದದ ಕಂಪನ್ನು ಸವಿಯುವ ಸೌಭಾಗ್ಯ ಒದಗಿಸಿದ್ದು ವಿಶೇಷವಾಗಿತ್ತು.